**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ : 947/2021**

**ಚಾಸಾ : 6**
**ಪ್ರಾಸಾ : 12**

| | |
|---|---|
| **ಹೆಸರು** | ಃ ಅನಿಲ್ ಕುಮಾರ್ |
| **ತಂದೆಯ ಹೆಸರು** | ಃ ಬಾಲಕೃಷ್ಣನ್ |
| **ವಯಸ್ಸು** | ಃ 34 ವರ್ಷ |
| **ಉದ್ಯೋಗ** | ಃ ಮ್ಯಾನೇಜರ್ ಆರೆಂಜ್ ಕೌಂಟಿ, ಸಿದ್ದಾಪುರ |
| **ವಾಸಸ್ಥಳ** | ಃ ಬಾಡಗ ಬಾಣಾಂಗಾಲ ಗ್ರಾಮ |

**ದಿನಾಂಕ ಃ 15-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ಚಾಸಾ-7 ರವರ ಪರಿಚಯವಿರುತ್ತದೆ. ಅವರು ನಮ್ಮ ಪಕ್ಕದ ಮನೆಯವರು. ಆರೋಪಿಗಳ ಪರಿಚಯವಿರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿ ಯಾವುದೇ ವಸ್ತು, ವಾಹನ ಹಾಗೂ ಹಣವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ7 ರಿಂದ 9 ಕೃತ್ಯ ಸ್ಥಳ ಹಾಗೂ ಅಮಾನತ್ತು ಮಹಜರಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿದ ಮೇರೆಗೆ ನಿಪಿ7 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ7(ಇ) ಎಂದು, ನಿಪಿ8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ8(ಡಿ) ಎಂದು ಹಾಗೂ ನಿಪಿ9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ9(ಡಿ) ಎಂದು ಗುರುತಿಸಲಾಯಿತು. ಸದರಿ ಮಹಜರಿಗಳಲ್ಲಿರುವ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 14 ನ್ನು ಈ ಮೊದಲು ನೋಡಿರುವುದಿಲ್ಲ. ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ.

**(ಈ ಹಂತದಲ್ಲಿ *ಸ. ಸ. ಅ.* ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ನಿಪಿ7 ರಿಂದ 9 ನ್ನು ಓದಿ ಹೇಳಲಾಯಿತು. ದಿನಾಂಕ 16-05-2021 ರಂದು ನಾನು ಹಾಗೂ ಚಾಸಾ7 ರವರು ಮಟ್ಟ ಬಾಡಗ ಬಾಣಾಂಗಾಲ ಗ್ರಾಮದಲ್ಲಿ ಮಾತನಾಡಿಕೊಂಡಿರುವಾಗ ಪೋಲಿಸರು ಬಂದು ಪ್ರಕರಣದ ವಿಚಾರವನ್ನು ತಿಳಿಸಿ, 1 ರಿಂದ 4 ನೇ ಆರೋಪಿಗಳು ತೋರಿಸುವ ಕೃತ್ಯ ಸ್ಥಳ ಹಾಗೂ ಅಮಾನತ್ತು ಮಹಜರಿನ ಸಮಯದಲ್ಲಿ ಸಾಕ್ಷಿಗಳಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನನ್ನನ್ನು ಹಾಗೂ ಚಾಸಾ7 ರವರನ್ನು 1 ರಿಂದ 4 ನೇ ಆರೋಪಿಗಳೊಂದಿಗೆ ಅವರು ತೋರಿಸಿದ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ 1 ರಿಂದ 4 ನೇ ಆರೋಪಿಗಳು ಪೋಲಿಸರಿಗೆ ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನನ್ನ ಹಾಗೂ ಚಾಸಾ-7 ರವರ ಸಮಕ್ಷಮ ನಿಪಿ 7 ರಂತೆ ಕೃತ್ಯ ಸ್ಥಳ ಮಹಜರ ಕ್ರಮ ಜರುಗಿಸಿ ಎಂದರೆ ಸರಿಯಲ್ಲ. ನಂತರ ಪೋಲಿಸರು ನನ್ನನ್ನು, ಚಾಸಾ7 ಹಾಗೂ 1 ರಿಂದ 4 ನೇ ಆರೋಪಿಗಳನ್ನು ಕರೆದುಕೊಂಡು 4 ನೇ ಆರೋಪಿಯು ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿಯು ಪೋಲಿಸರಿಗೆ ಕೃತ್ಯಕ್ಕೆ ಬಳಸಿದ 1 ರಿಂದ 13 ಮು ಮಾಲುಗಳನ್ನು ಹಾಗೂ ಕೃತ್ಯಕ್ಕೆ ಬಳಸಿದ ಕೆಎ 13 ಎಂ 4035 ನೋಂದಣಿ ಸಂಖ್ಯೆಯ ಬುಲೆರೋ ಪಿಕಪ್ ವಾಹನ ಹಾಗೂ ಕೆಎ 14 ವೈ 1200 ನೋಂದಣಿ ಸಂಖ್ಯೆಯ ಸ್ಕೂಟರ್ ನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನನ್ನ ಹಾಗೂ ಚಾಸಾ7 ರವರ ಸಮಕ್ಷಮ ನಿಪಿ 9 ರಂತೆ ಮಹಜರ ಕ್ರಮ ಜರುಗಿಸಿ ಸದರಿ ಮು ಮಾ 1 ರಿಂದ 13 ಹಾಗೂ ಮೇಲೆ ಹೇಳಿದ ಬೈಕ್ ಹಾಗೂ ಪಿಕಪ್ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನನ್ನನ್ನು ಹಾಗೂ ಚಾಸಾ7 ರವರನ್ನು 1 ರಿಂದ 4 ನೇ ಆರೋಪಿಗಳೊಂದಿಗೆ 3 ನೇ ಆರೋಪಿ ವಾಸವಿದ್ದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 3 ನೇ ಆರೋಪಿಯು ದನದ ಮಾಂಸವನ್ನು ಮಾರಾಟ ಮಾಡಿ ಬಂದ ಮು ಮಾ 14 ಹಣವನ್ನು ಹಾಗೂ ಕೃತ್ಯಕ್ಕೆ ಬಳಸಿದ ಕೆಎ 12 ಕ್ಯೂ 1704 ನೋಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಮೋಟಾರ್ ಬೈಕ್ ನ್ನು ಹಾಜರುಪಡಿಸಿದ್ದು, ಪೋಲಿಸರು ನನ್ನ ಹಾಗೂ ಚಾಸಾ7 ರವರ ಸಮಕ್ಷಮ ನಿಪಿ 8 ರಂತೆ ಮಹಜರ ಕ್ರಮ ಜರುಗಿಸಿ ಸದರಿ ಮು ಮಾ 14 ಹಣ ಹಾಗೂ ಮೇಲೆ ಹೇಳಿದ ರಾಯಲ್) ಎನ್ ಫೀಲ್ಡ್ ಬೈಕ್ ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಅದೇ ದಿನ ಅಂದರೆ ದಿನಾಂಕ 16-05-2021 ರಂದು ನಾನು ಪೋಲಿಸರ ಮುಂದೆ ಈ ಎಲ್ಲಾ ಸಂಗತಿಗಳ ಬಗ್ಗೆ " ದಿನಾಂಕ 16-05-2021 ರಂದು ------------------------------------------------------------------------------------------- ನೋಡಿದರೆ

ಗುರುತಿಸುತ್ತೇನೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ20 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ದಿನಾಂಕದಂದು ನಿಪಿ 7 ರಿಂದ 9 ನ್ನು ಬರೆಯುವಾಗ ನಾನು ಸ್ಥಳದಲ್ಲಿದ್ದು, ನಿಪಿ7 ರಿಂದ 9 ರಲ್ಲಿರುವ ಸಂಗತಿಗಳನ್ನು ತಿಳಿದುಕೊಂಡು, ಅದಕ್ಕೆ ಸಹಿ ಮಾಡಿ ನಂತರ ನಿಪಿ 20 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಃ ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ ಃ**

ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.